ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue 1, July-August, 2024, Pp. 42-50**
**©*IIMRD*, Mysuru**
IIMRD JOURNALS

**www.iimrd.com**

# ಉತ್ತರ ಕರ್ನಾಟಕದ ಮದುವೆ ಸಂಪ್ರದಾಯದ ಹಾಡುಗಳ ಇಣಕು ನೋಟ

**ಡಾ. ಎಸ್. ಬಿ. ರಾಠೋಡ**

ಸಹ ಪ್ರಾಧ್ಯಾಪಕರು, ಪ್ರಾಚಾರ್ಯರು ಮತ್ತು ಮುಖ್ಯಸ್ಥರು ಕನ್ನಡ ವಿಭಾಗ ಹಾಗೂ ಸಂಶೋಧನಾ ಮಾರ್ಗದರ್ಶಕರು(ಹಂ.ವಿ.ವಿ), ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ

**ಸಾರಾಂಶ: (Abstract)**

*ಜಗತ್ತಿನ ಮನುಷ್ಯಕುಲದಲ್ಲಿ ನಡೆಯುವ ಏಕೈಕ ಸಂಪ್ರದಾಯ ಅಂದರೆ ಮದುವೆ ಸಂಪ್ರದಾಯ. ಅವರವರ ಮತ ಧರ್ಮಕ್ಕೆ ಮತ್ತು ಪಂಪರೆಗೆ ಅನುಕೂಲವಾಗುವಂತೆ ಲಗ್ನ ಅನ್ನುವಂತಹ ಬಂಧನದಲ್ಲಿ ನವದಂಪತಿಗಳನ್ನು, ಸಪ್ತ ಹೆಜ್ಜೆಗಳನ್ನು ತುಳಿಸಿ ಸಂಸಾರವೇಂಬ ಗುರುತರ ಜವಾಬ್ದಾರಿಯನ್ನು ಹೋರಿಸುವುದೇ ಮದುವೆ ಸಂಪ್ರದಾಯ. ಜಗತ್ತಿನ ಎಲ್ಲ ಸಂಪ್ರದಾಯಗಳಂತ ಉತ್ತರ ಕರ್ನಾಟಕದಲ್ಲಿ ನಡೆಯುವ ವಿಶೇಷ ಮತ್ತು ವಿಶಿಷ್ಠ ಹಾಡುಗಳು ಈ ಲೇಖನದಲ್ಲಿ ಇವೆ. ಅತೀ ವೇಗದಿಂದ ಸಾಗುತ್ತಿರುವ ಜನಮಾನರ ಮನಸ್ಸು ಸಂಪ್ರದಾಯದಿಂದ ಬಹು ದೂರ ಉಳಿದುಕೊಳ್ಳುತ್ತಿದೆ. ಈ ಎಲ್ಲ ಸಂಪ್ರದಾಯ ಇವತ್ತಿನ ಯುವಪೀಳಿಗೆಗೆ ಮನನ ಮಾಡಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.*

**ಮುಖ್ಯಪದಗಳು (Keywords):** ಉತ್ತರ ಕರ್ನಾಟಕ, ಸಂಪ್ರದಾಯ, ಮದುವೆ ಹಾಡುಗಳು.

## ಪೀಠಿಕೆ

ಜಗತ್ತಿನ ಮೂಲೆ ಮೂಲೆಯಲ್ಲಿ ತಮ್ಮ ತಮ್ಮ ಪರಂಪರೆಯ ಅನೂಗುಣವಾಗಿ ಅವರ ಆಚಾರ–ವಿಚಾರ ನಡವಳಿಕೆಗಳಂತೆ ನಡೆಯುವ ಏಕೈಕ ಸಂಪ್ರದಾಯ ಅಂದರೆ ಅದು ಮದುವೆ ಅಥವಾ ಲಗ್ನ ಸಂಪ್ರದಾಯ. ಈ ಮದುವೆಯನ್ನುವುದು ಮನರಂಜನೆಯ ಜೊತೆಗೆ ಎರಡು 'ನವ–ನವಿನ ಹೃದಗಳ ಮಿಲನ' ಮುಂದಿನ ಜೀವನಕ್ಕೆ ಸಪ್ತಹೆಜ್ಜೆಗಳನ್ನಿಟ್ಟು, ಸುಖ ದು:ಖದಲ್ಲಿ ಸಹಭಾಗಿಗಳಾಗಿ ಸಂಸಾರದಲ್ಲಿ ನೆಮ್ಮದಿ ಹುಡುಕುವ ಎರಡು ಬಡ ಜೀವಗಳು. ಮದುವೆಗಳಲ್ಲಿ ಅವರವರ ಸಂಪ್ರದಾಯದಂತೆ ಹಲವಾರು ಪ್ರಕಾರುಗಳಿವೆ. ವಚನಕಾರರು ಹೇಳಿದಂತೆ "ಇದ್ದವರು ಶಿವಾಲಯ ಮಾಡುವವರಯ್ಯ ನಾನೇನು ಮಾಡಲಿ ಬಡವನಯ್ಯ" ಎಂಬನಂತೆ ಸ್ಥಿತಿವಂತರು ಬಹಳ ಅದ್ದೂರಿಯಾಗಿ, ದಾಮ್ ಧೂಮದಿಂದ ಮದುವೆ ಮಾಡಿದರೆ; ಬಡವರು ಸರಳವಾಗಿ ಅಥವಾ ಸಾಮೂಹಿಕವಾಗಿ ಮದುವೆ ಮಾಡಿ ಮುಗಿಸುವರು. ಇಂತಹ ಸುಸಂದರ್ಭದಲ್ಲಿ ಹಾಡುವ ಹಾಡುಗಳೆ ಮದುವೆಯ ಸಂಪ್ರದಾಯದ ಹಾಡುಗಳು.

*Please cite this article as:* ರಾಠೋಡ. ಎಸ್. ಬಿ. (2024). ಉತ್ತರ ಕರ್ನಾಟಕದ ಮದುವೆ ಸಂಪ್ರದಾಯದ ಹಾಡುಗಳ ಇಣಕು ನೋಟ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(1). ಪು.ಸಂ.* 42–50

ಮದುವೆಯನ್ನುವದು ಪ್ರತಿಯೊಂದು ಸಮುದಾಯದಲ್ಲಿ ತಮ್ಮದೆ ಆದ ರೀತಿ, ರಿವಾಜು ಮತ್ತು ನಿಯಮದ ಪ್ರಕಾರ ಪ್ರತಿಯೊಬ್ಬರಿಗೂ ಜೀವನದಲ್ಲಿರುವ ಒಂದು ಮಹಾಸಂಗಮ. ಗಂಡು ಆಕಾಶವಾದರೆ, ಹೆಣ್ಣು ಪ್ರಕೃತಿ ಎಂಬ ಪರಿಕಲ್ಪನೆ, ಧನ–ಋಣ ವಿದ್ಯುತ್ತುಗಳು ಎಲ್ಲಿದ್ದರೂ ಹೇಗಿದ್ದರೂ ಒಂದುಗೂಡುವದಕ್ಕೆ ಹಾತೊರೆಯುವವು. ಆ ಹಾತೊರೆಯುವ, ತವಕಗಳನ್ನು ಯೋಗ್ಯ ದಿಶೆಯಲ್ಲಿ ಮುನ್ನೂಗ್ಗಿಸುವದಕ್ಕಾಗಿ, ಆಯಾ ಸಾಮಾಜಿಕ ಸಮುದಾಯದವರು ಮದುವೆಯೆಂಬ ಮಹಾಸಂಪ್ರದಾಯವನ್ನು ರೂಡಿಮಾಡಿಕೊಂಡಿದ್ದಾರೆ. ತವರು ಮನೆಯ ಹೆಣ್ಣುಮಗಳು ಅತ್ತೆಯ ಮನೆಯ ಸೊಸೆಯಾಗಲಿರುವ ಸುಸಂದರ್ಭ. ತಂದೆಯ ಸಂರಕ್ಷಣೆಯಿಂದ ಗಂಡನ ಸಂರಕ್ಷಣೆಗೆ ಒಳಪಡಬೇಕಾಗಿರುವ ಅಮೃತ ಗಳಿಗೆ, ತಾಯಿಯ ಅಕ್ಕರೆಯು ಅತ್ತೆಯ ಸಕ್ಕರೆಯಾಗಲಿರುವ ಮುಹರ್ತ; ಬೆಟ್ಟದ ನೆಲ್ಲಿಕಾಯಿ, ಸಮುದ್ರದ ಉಪ್ಪು ಒಂದ್ಗೂಡಿ ಸಮರಸವಾಗುವ ಶುಭ ಸಮಯ. ಇವೆಲ್ಲವುಗಳಿಗೆ ಜೀವಾಳವಾಗಿರುವ ಪುರುಷನ ಸಂಕಲ್ಪ ಧನದೊಂದಿಗೆ ಪ್ರಕೃತಿಯ ಶಕ್ತಿಋಣವನ್ನು ಸಂಧಿಸುವ ದಿವ್ಯ ಅಮೃತಘಳಿಗೆ, ಅದುವೇ ಮದುವೆ ಮಹಾಸಂಸ್ಕಾರ ವೆಂದೇನಿಸುವದು. ನೆರೆದ ಬಂಧು–ಬಳಗ ಅಣಿಗೊಳಿಸಿದ ವಿವಿಧ ಅನ್ನಭೋಜನ ಸಾಮಗ್ರಿಗಳು, ಮಿನಗುವ, ಬೆಳಗುವ ದೀಪದ ಅಲಂಕಾರ, ಮಧು ಮಗಳಂತೆಯೇ ಸಿಂಗಾರಗೊಂಡ ಮಂಟಪ, ಹಿರಿಯ ಕಿರಿಯರ ಸರಸ ಸಲ್ಲಾಪದ ಮಾತುಗಳು, ಹೆಂಗಳೆಯರ ಹಂಸನಡಿಗೆಯ ಓಡಾಟ ಮೊದಲಾದವುಗಳೆಲ್ಲ ಆ ಸಂಸ್ಕಾರದ ಮಹಾ ಸಂಗಮಕ್ಕೆ ಸಿದ್ಧತೆ ನಡೆಸುವುದು. ಮದುವೆಯ ಹಾಡುಗಳೇ ಅಲ್ಲಿ ಘೋಷಿಸುವ ಮಂತ್ರಗಳು. ದಾಂಪತ್ಯವು ಜೀವನದ ಬಹು ಮುಖ್ಯ ವಿಭಾಗವಾಗಿರುವದರಿಂದ ಅದೊಂದು ಮಹಾ ಪವಿತ್ರ ಯಜ್ಞದಂತೆ ಸಾಗುವದಕ್ಕಾಗಿ ಯಜ್ಞಮಂತ್ರಗಳಂತಿರುವ ಮದುವೆಯ ಹಾಡುಗಳನ್ನು, ಮದುವೆಯ ಕಾಲಕ್ಕೆ ಬೇರೆ ಬೇರೆ ವಿಧಾನಗಳು ನಡೆಯುವಾಗ ಹೆಣ್ಣು ಮಕ್ಕಳು ಲಯಬದ್ದವಾಗಿ, ತಾಳಬದ್ಧವಾಗಿ, ಜನರ ಮನಸ್ಸನ್ನು ಸೂರೆಗೊಳ್ಳುವಂತೆ ಈ ಸಂಮಾರಭದಲ್ಲಿ ಹಾಡುವರು.

**ಮದುವೆ ನಡೆಯುವ ಸ್ಥಳ ಮತ್ತು ವಿಧಾನಗಳು**

ಮದುವೆ ಸಾಮಾನ್ಯವಾಗಿ ಹೆಣ್ಣಿನ ಮನೆ ಇಲ್ಲವೆ ಗಂಡಿನ ಮನೆಯ ಮುಂದೆ ನಡೆಯುತ್ತದೆ. ಇಲ್ಲವಾದರೆ ಗುಡಿಗಳಲ್ಲಿ, ಕಲ್ಯಾಣ ಮಂಟಪಗಳಲ್ಲಿ, ಅನುಕೂಲೀರುವ ಸ್ಥಳಗಳಲ್ಲಿ ನಡೆಯುತ್ತದೆ. ಮದುವೆ ಮೂರು ದಿವಸ ನಡೆಯಬೇಕೆಂದು ಅಂದಾಜುಗಳು ಇದ್ದವು. ಆದರೆ ಇಂದು ಒಂದು ದಿನಾ ಹೆಚ್ಚಾಯಿತು ಅನ್ನುವವರು ಇದ್ದಾರೆ. ಮೊದಲನೆಯ ದಿವಸ ಮದುಮಕ್ಕಳಿಗೆ ಅರಿಷಿಣ ಹಚ್ಚುವದು; ಇನ್ನೊಂದು ದಿವಸ ದೇವತಾ ಪೂಜೆ ಮೂರನೆಯ ದಿವಸ ಅಕ್ಷತೆ ಅಂದರೆ ಅಕ್ಕಿಕಾಳು ಹಾಕುವದು ಇದು ಎರಡು ದಶಕಗಳ ಹಿಂದೆ ಇತ್ತು. ಆದರೆ ಇವು ಎಲ್ಲವೂ ಒಂದೆ ದಿನದಲ್ಲಿ ಇಂದು ಮುಗಿಯುತ್ತಿರುವುದು ವಿಪರ್ಯಾಸ. ಇದಕ್ಕೂ ಮೊದಲಿಗೆ ನಿಶ್ಚಯ ಅಥವಾ ಗಟ್ಟಿಕಡಬು (ಭಾಟಿಗೆ) ಮೊದಲಾದ ವಿಧಾನಗಳು ನಡೆಯುತ್ತವೆ. ಮದುವೆಯ ಕಾಲದಲ್ಲಿ ನಡೆಯುವ ಎಲ್ಲ ವಿಧಾನಗಳಲ್ಲಿಯೂ ಹಾಡು ಹೇಳಲಾಗುತ್ತದೆ. ಆ ಹಾಡುಗಳು ಆ ವಿಧಾನಗಳನ್ನು ಹೇಳುವಂತಿವೆ. ಆದ್ದರಿಂದ ಅವು ಕೇವಲ ಮನರಂಜನೆಯ ಹಾಡುಗಳಾಗಲಾರವು. ಆದರೆ ಇನ್ನೊಂದು ದೃಷ್ಟಿಯಿಂದ ಆ ಹಾಡುಗಳನ್ನು ಕೇಳಿ ನೋಡಿದರೆ ಅವುಗಳಲ್ಲಿ ರಸದ ವರತೆಯೇ ಇದ್ದಂತೆ ತೋರುತ್ತದೆ. ಹಾಗೆಯೇ ಒಗಟು–ಒಡಪುಗಳ ಸುರಿಮಳೆಯೇ ನಡೆಯುತ್ತದೆ.

### ನಿಶ್ಚಿತಾರ್ಥ ಕಾರ್ಯಕ್ರಮದ ಹಾಡುವ ಹಾಡುಗಳು

ಮೊದಲಿಗೆ ಹೆಣ್ಣಿನವರೂ, ಗಂಡಿನವರೂ, ತಮ್ಮ ತಮ್ಮೊಳಗೆ ಮಾತನಾಡಿಕೊಂಡು ನಿಶ್ಚಯ ಮಾಡುವರಲ್ಲದೆ ಕನ್ಯಗೆ ಕುಂಕುಮ ಹಚ್ಚುತ್ತಾರೆ. ಆ ಬಳಿಕ ತಮ್ಮ ತಮ್ಮೊಳಗೆ ಮಾತನಾಡಿಕೊಂಡು ನಿಶ್ಚಯದ ಮಾತುಗಳು ಪಂಚಜನರ ಸಾಕ್ಷಿಯಾಗಿ ಗಟ್ಟಿ ಮಾಡುತ್ತಾರೆ. ಆ ಕಾಲದ ನೈಮಿತ್ತಿಕ ಕಾರ್ಯಕ್ಕೆ ಭಾಟಿಗೆ ಹಾಕುವದು ಎನ್ನುತ್ತಾರೆ. ವರನ ಕಡೆಯವರು ಕನ್ಯ ನೋಡಲಿಕ್ಕೆ ಅಂದರೆ ಹೆಣ್ಣು ಬೇಡಲಿಕ್ಕೆ– ಕೂಸು ಬೇಡಲಿಕ್ಕೆ ಹೋಗುವರು. "ಕೂಸು ಬೇಡಲಿ ಹೋದ್ರ ಕೂಸೇನು ಮಾಡತಿರಲೆ । ಕೂಸ್ಥಾಲುಬಾನಾ ಉಣತಿರಲೇ, ಕೂಸಿನ ತಾಯಿ ಕುಸುಮಾಯದ ನಗೆಯ ನಗುತಿರಲೆ" ಹೀಗಿರುವದು ಶುಭ ಚಿಹ್ನ, ಅಲ್ಲದೆ ಗೋಡೆಯ ಮಗ್ಗಲಿನ ಜೋಡು ಮಾವಿನ ಮರದ ತೀರ ತುದಿಯಲ್ಲಿ ಕುಳಿತು ಪಕ್ಷಿಗಳು ಗಲಬಲಿ ಸತ್ತಿದ್ದರೆ, ಕನ್ಯಾರ್ಥಿಗಳ ಕೆಲಸರ್ಧ ಕೈಗೂಡಿದಂತೆಯೇ, ಪಡಸಾಲೆಯಲ್ಲಿ ಕುಳಿತ ದೊಡ್ಡಪ್ಪನು ಒಳಗಿರುವ ಮಡದಿಯನ್ನು ಕರೆದು ಅವರಿಗೆ ಮಗಳನ್ನು ಕೊಡೋಣವೇ?" ಎಂದು ಕೇಳುತ್ತಾನೆ. ಅದಕ್ಕೆ ಗೃಹಿಣಿಯು ಹೇಳುವ ಸಲಹೆ ಈ ತ್ರಿಪದಿಯಲ್ಲಿ ವರ್ಣಿಸಲಾಗಿದೆ.

***ವರ ಸುದ್ದನಿದ್ದರ ಕುಲ ಚೊಕ್ಕನಿದ್ದರ***
***ಫಣಿ ನಾಲಗಿ ಸುದ್ದ ಮುಖ ಸುದ್ದ । ನಿದ್ದರ ।***
***ಕುಡ ಹೋಗಿರಿ ನಮ್ಮ ಮಗಳನ್ನ ।***

ಈ ಮೇಲಿನ ತ್ರಿಪದಿಯಲ್ಲಿ ವರನ ಪೂರ್ಣ ಶಾರೀರಿಕ ಪರೀಕ್ಷೆದೊಂದಿಗೆ ಮತ್ತು ಕುಲಗೊತ್ರದದ ಪರೀಕ್ಷೆಯೊಂದಿಗೆ ಕೊಡು ಎಂದು ಹೇಳುವ ಸತಿ–ಪತಿಗಳ ಒಪ್ಪಿತ ಸೂಚನೆ. ಅದರಂತೆ ದೊಡ್ಡಪ್ಪ ಕನ್ನೆ ಕೊಡುವದಕ್ಕೆ ಒಪ್ಪಿಕೊಳ್ಳುವರು. ಇನ್ನು ಅಲ್ಲಿ ಆ ವರನ ಮನೆಯಲ್ಲಿ ಭಾಟಿಗೆ ಕೆಲಸದ ಗಡಿಬಿಡಿ, ಆ ಮನೆಯ ಅತ್ತಿಗೆಗೂ ಈ ಮನೆಯ ನಾದಿನಿಗೂ ಬಾಲನ ಭಾಟಿಗೆಗೆ ಬರಬೇಕೆಂದು ಆಮಂತ್ರಣ ಶುಕ್ರವಾರ ದಿನ ಸರ್ಯನುದಿಸಿದಂತೆ, ಮಂಗಳವಾರ ದಿನ ಚಂದ್ರನುದಿಸಿದಂತೆ ಅಳಿಯನು ಉದಯವಾಗಲು ಶಾವಿಗೆ–ಸೈದಾನ, ಹಪ್ಪಳ–ಸಂಡಿಗೆ ಹದ ಮಾಡತೊಡಗುವರು. ಕಡಲಿಕಾಳಂಗ ಕಟದ ಮುತ್ತಿಟ್ಟ, ಉದ್ದಿನ ಬಾಳೆಂಗ ತಿದ್ದಿ ಮುತ್ತಿಟ್ಟ ಅಳಿಯನ ಚಲುವಿಕೆ ನೋಡಿದವರೆಲ್ಲ ದೊಡ್ಡವರ ತಕ್ಕ ಅಳಿಯನೆಂದು ಸಂತಸದಿ ಒಪ್ಪಿಕೊಳ್ಳುವರು.

### ಒಳಕಲ್ಲು ಪೂಜೆ ಮತ್ತು ಐದೆಯರ ಹಾಡುಗಳು

ವರನ ನಿಶ್ಚಯದ ಕೆಲಸ ಮುಗಿಯುತ್ತಲೇ ಲಗ್ನ ಮುಹರ್ತ ತಗೆಯಿಸಿ ಹಿಟ್ಟು ಅಕ್ಕಿಯ ಸಾಹಿತ್ಯವನ್ನು ಸಿದ್ಧಗೊಳಿಸುವದಕ್ಕೆ ಆರಂಭಿಸುತ್ತಾರೆ. ಮೊದಲಿಗೆ ಒರಳು ಕಲ್ಲು ಮೊದಲಾದವುಗಳನ್ನು ಮುತ್ತೈದೆಯರು ಪೂಜಿಸುತ್ತಾರೆ. ಆ ಕೆಲಸಕ್ಕೆ ಬಂಧು–ಬಳಗದವರು ನೆರೆ–ಹೊರೆಯವರು ಸಹ ಕರೆಯುತ್ತಾರೆ. "ಕಲ್ಲ ಪೂಜಿ ಮಾಡಲಕ ನನ್ಯಾರು ಕರಸ್ಯಾರ ಸಾಲ ಮಾಳಗಿ ಮನೆಯವಳ" ಸಾಲ ಮಾಳಗಿ ಮನೆಯನ್ನು ವದಷ್ಟೇ ಗೊತ್ತು. ಪಿಲ್ಲೆ ಇಟ್ಟ ಕಾಲಿನ ಮಗಳನ್ನು ಕರೆಯಲು ಪಲ್ಲಕ್ಕಿ ಹೋಗಿದೆ. ನಂಟರನ್ನು ಕರೆಯಲು ಮಂಟಪ ಕಳಿಸಿದ್ದಾರೆ. ಮಂಟಿಗೆ ಧರಿಸಿದ ಮಗಳ ಕಡೆಗೆ ಒಂಟಿ ಸಿಂಗಾರಾಗಿಹೋಗಿದೆ. ಕಾಲದಲ್ಲಿ ಅಳಿಯ–

ದೇವರೆನಿಸಿದರೆ ಆಶ್ಚರ್ಯವಲ್ಲ. ಒರಳು ಕಲ್ಲುಗಳೂ ಪೂಜೆ ಗೊಳ್ಳುತ್ತವೆ! ಒನಕೆಯ ಸಿಂಗಾರವೇ ಬೇರೆ. ಅಣ್ಣ ತಮ್ಮಂದಿರು ಹಾಲ ಬೋನವನುಂಡು ಹೊನ್ನಿನುಳಿಬಾಚಿಯನ್ನು ಹೆಗಲಿಗೇರಿಸಿ ಗುಡ್ಡಕ್ಕೆ ಹೋಗಿ ಹೊನ್ನಿ ಯಮರ ಕಡಿದು ಮಾಡಿದ ಒನಕೆ! ಅಪ್ಪನೂ ಮಗನೂ ತುಪ್ಪ ಬೋನವನುಂಡು ಉಕ್ಕಿನುಳಿ ಬಾಚಿ ಹಿಡಕೊಂಡು ಗುಡ್ಡಕ್ಕೆ ಹೋಗಿ ಹಿಪ್ಪೆಯ ಮರ ಕಡಿದು ಮಾಡಿದ ಒನಕೆ!! ಮೊರಕೆ ಮುತ್ತಿನ ಕಟ್ಟು! ಒನಕೆಗೆ ಹುರಿ ಗೆಜ್ಜೆ! ಹೊನ್ನ ಮಾಣಿಕದ ಮರಜರಡಿ!! ತಕ್ಕೊಂಡು ಕನ್ಯೆಯರು ಶಿವಶರಣು ಎಂದು ಹಾಡುವರು. ಅಂಗೈ ಚಂದಕೆ ಮುಂಗೈ ತಿರುವುತ್ತ ಅಂಬರಕೆ ಒನಕೆಯ ನೆಸೆಯುವ ಮಕ್ಕಳು! ಆ ಕೈಯ ಚಂದಕೆ ಈ ಕೈಯ ತಿರುಹುತ ಆಕಾಶಕೆ ಒನಕೆಯನೆಸೆಯುವ ಮನೆಯ ಸೊಸೆಯರು!! ಎತ್ತಲಾರದಷ್ಟು ಬೆಳ್ಳಿ ಬಂಗಾರ ತೊಡಿಗೆಗಳನ್ನು ಧರಿಸಿ ಸುತ್ತಿ ಬಂದ ಸೆರಗನ್ನು ಮುಡಿಗೆ ಕಟ್ಟಿಕೊಂಡು ಆನಂದಭರಿತವಾದ ಹಾಡು ಹೇಳುವ ಆ ಅಕ್ಕ–ತಂಗಿಯರ ಉಲ್ಲಾಸ, ಸೊಗಸು ತುಂಬಿದ ಸಭೆಗೊಂದು ಝೆಂಕಾರ ವಿದ್ದಂತೆ ಗೋಚರಿಸುವುದು.

**ಬೀಗರನ್ನು ಎದುರುಗೊಳ್ಳುವ ಸುಸಂದರ್ಭ**

ವರನ ಮನೆಯ ಮುಂದೆ ಮದುವೆಯಾಗುವದಿದ್ದರೆ ಹೆಣ್ಣಿನವರು, ಕನ್ಯೆಯ ಮನೆಯ ಮುಂದೆ ಮದುವೆಯಾಗುವದಿದ್ದರೆ ಗಂಡಿನವರು ತಂತಮ್ಮ ಬಳಗದವರೊಂದಿಗೆ ದೀಪ, ವಾದ್ಯ ಮೊದಲಾದ ಅಲಂಕಾರದೊಂದಿಗೆ, ಐಶ್ವರ್ಯದೊಂದಿಗೆ ತಮ್ಮೂರಿಂದ ಬೀಗರೂರಿಗೆ ಹೊರಡುವದೇ ನಿಬ್ಬಣ. ಹಾಗೆ ಒಂದು ಚಂದ. "ಕಳಸಾ ತಕ್ಕೊಳ್ಳೆ ಕಳೆಯುಳ್ಳ ಮುತ್ತೆದೆ" "ಗಿಂಡೀ ತಕ್ಕೊಳ್ಳೇ ಅಂದುಳ್ಳ ಮುತ್ತೈದೆ" ಎಂಬ ಕೂಗಾಟಗಳು ಕೇಳಿ ಬರುವವು. ನಿಬ್ಬಣ ಹೊರಟಾಗ ಶುಭ ಚಿಹ್ನೆಗಳು ಕಾಣಿಸಿಕೊಳ್ಳಬೇಕು ಅತೀ ಉತ್ತಮ.

*ಬಾಗಿಲ ಬಿಟ್ ಹೊರ್ಡುವಾಗ ಬಾಳೆ ಪಲ್ಲವಿಸ್ಯಾವೆ।*
*ಬಾಗಿಲಾನ ಗೌಳಿ ನುಡಿದಾವೆ ॥*
*ಹಟ್ಟಿ ಬಿಟ್ಟು ಹೊರ್ಡುವಾಗ ಹಣ್ಣು ಪಲ್ಲವಿಸ್ಯಾವೆ ।*
*ಹಟ್ಯಾಗ್ನ ಗೌಳಿ ನುಡಿದಾವೆ ॥*
*ಅಂಗಳ ಬಿಟ್ಟು ಹೊರ್ಡುವಾಗ ನಿಂಬೆ ಪಲ್ಲವಿಸ್ಯಾವೆ ।*
*ಅಂಗಳದ ಗೌಳಿ ನುಡಿದಾವೆ ॥*

"ಹತ್ತೆಮ್ಮೆ ಜೋಕೆ, ಮನೆ ಜೋಕೆ, ಮಿತ್ರೆನ ಗೆದ್ದು ನಾಳೆ ಬರತೀನಿ" ಎಂದು ಹೊರಡುವ ಮದುವಣಿಗನಿಗೆ ಹೀಗೆ ಹೇಳಲಾಗುತ್ತದೆ.

*ಮಿತ್ರೇನ ಗೆದಿಯೋಕೆ ನನ್ನಿಚ್ಛೆ ನಿನ್ನಿಚ್ಛೆ*
*ಮನೆದೇವರ ಕರುಣೆ ನಿನ್ನ ಮ್ಯಾಲೆ । ಇದ್ದರೆ ॥*
*ಮಿತ್ರೇನ ಗೆದ್ದು ನಾಳೆ ಬರಹೋಗು ॥*

ಆ ಬಳಿಕ "ಅತ್ತ ಶರಣೆನ್ನಿ , ಇತ್ತ ಶರಣೆನ್ನಿ । ಸುತ್ತಲ ದೇವರಿಗೆ ಶರಣೆನ್ನಿ ಎಂದು ಕೈ ಮುಗಿದು, ಸಮನೆಗಳಿಗೆ ಬೀಗ ಹಾಕಿ, ಕೆಂಬರುಗಣ್ಣಿನ ಕಟ್ಟಾಳುಗಳನ್ನು ಕಾವಲಿರಿಸಿ–"ಅಕ್ಕಾ ಅಕ್ಕಯ್ಯ ಹೊರಡಿ! ತಂಗೀ ತಂಗೆಮ್ಮ ಹೊರಡಿ!! ತಾಯಿ, ತಾಯವ್ವ ಹೊರಡಿ!!!" ಎಂದು ಒಬ್ಬರನ್ನೊಬ್ಬರು ಮುಂದೆ ಮಾಡಿಕೊಂಡು

ಹೊರಡುವರು. ಹೂ ಬರುವ ಮೊದಲೇ ಕಂಪು ಬರುವಂತೆ ಬೀಗರು ಬಂದರೆಂದು ಮೊದಲೇ ಗೊತ್ತಾಗುತ್ತದೆ. "ಎಲ್ಲಿ ಬಿಟ್ಟಿರಿ, ಬುತ್ತೆಲ್ಲಿ ಉಂಡಿರಿ! ಸುಕ್ಕರ ನಿಮಗೆಲ್ಲಿ ಉದಿಸಿದ" ಎಂದು ಒಬ್ಬರು ಕೇಳಿದರೆ, "ಬೀಡಲ್ಲಿ ಬಿಟ್ಟಿರಿ, ಬಾನವೆಲ್ಲಿ ಉಂಡಿರಿ! ಸೂರ್ಯ ನಿಮಗೆಲ್ಲಿ ಉದಿಸಿದ" ಎಂದು ಇನ್ನೊಬ್ಬರು ಕೇಳುವರು. "ಅಗೋ ಎತ್ತಿನ ಮುಂದೆ ಕಳಸ ಹಿಡಿದಿರುವವಳೇ ಮದುವಣಿಗನ ಹಿರಿಯಕ್ಕ! ಹೋರಿಯ ಮುಂದೆ ಕಳಸ ಹಿಡಿದಿರುವವಳೇ ಮದುವಣಿಗನ ಕಿರುತಂಗಿ!! ಇತ್ತ ನಂದಿಯ ಮುಂದೆ ಬಳಕುತ್ತ ಬರುವವಳೇ ಸುಂದರ ಮದುಮಗನ ಹಡೆದವ್ವ!!:" ಎಂಬ ಉದ್ಗಾರಗಳು ಕೇಳಿಬರುವವು. ಅದರೊಂದಿಗೆ,

*ಈ ಊರ ಮುಂದೊಂದು ಆಲದ ಮರವಿಲ್ಲ*
*ಆನಿ ಕಟ್ಟಾಕೆ ನೆರಳಿಲ್ಲ । ಊರಾಗ ।*
*ರಾಯರು ಮುಖ ತೊಳಿಯೋ ಕೊಳವಿಲ್ಲ ॥*
*ಈ ಊರ ಮುಂದೊಂದು ಅತ್ತಿಯ ಮರವಿಲ್ಲ*
*ಎತ್ತು ಕಟ್ಟಾಕೆ ನೆರಳಿಲ್ಲ । ಊರಾಗ ।*
*ಮಿತ್ರೇರು ಮುಖ ತೊಳಿಯೋ ಕೊಳವಿಲ್ಲ ॥*

ಎನ್ನುವ ಅನನುಕೂಲತೆಯ ಗೀಳುನುಡಿಗಳು ಕೇಳಿಬರುವವು.

**ಮದುಮಕ್ಕಳ ಅರಿಸಿಣ ಹಚ್ಚುವ ಕಾರ್ಯಕ್ರಮ**

ಅರಿಸಿಣ ಹಚ್ಚುವದು ಲಗ್ನ ಕಾಲದ ಪ್ರಥಮ ಹಂತ. ಮುತ್ತೈದೆಯರು ನೆರೆದು ಹಾಡು ಹೇಳುತ್ತ ವೀಳ್ಯದೆಲೆಯಿಂದ ಎಣ್ಣೆಯನ್ನು ಹಚ್ಚಿ, ಮೈಗೆ ಅರಿಸಿಣವನ್ನು ಬಳಿದು ಸ್ನಾನ ಮಾಡಿಸುವರು. ಈ ವಿಧಾನವು ವಧುವರರಿಗೆ ಬೇರೆ ಬೇರೆ ಸ್ಥಳಗಳಲ್ಲಿ ನೆರವೇರಿಸುವರು. ಆಗ ಮಂಗಲವಾದ್ಯಗಳು ಮೊಳಗುವವು. ಮೊದಲು ವರನಿಗೆ, ಹಿಂದುಗಡೆ ವಧುವಿಗೆ ಅರಿಸಿಣ ಹಚ್ಚುವರು. ವಧು–ವರರು ಪಾರ್ವತಿ–ಶಿವ ಸ್ವರೂಪವೆಂದು ಭಾವಿಸುವರು. ನೇರವಾಗಿ ಶಿವ–ಪಾರ್ವತಿಯರಿಗೇ ಎಣ್ಣೆ ಹೂಸುವರೇನೋ ಎನ್ನುವಂತೆ ಆಸ್ಥೆವಹಿಸುವರು. ಎಣ್ಣೆ ಹಚ್ಚುವಷ್ಟರಲ್ಲಿಯೇ ಅಂಗಳಕೆ ಬಿಸಿಲು ಬರುವದು. ಸುಮಾರು ತೋಟಗಳಿಂದ ತಂದ ಎಲೆಗಳು ಸಾಲದೆ ಹೋಗುವವು.

*ನೀರಿಲ್ಲದಂಗಳಾಗ ನೀನ್ಯಾಕನಾಗ್ಯಾವ*
*ಊರಿಗಿ ದೊಡ್ಡವರ ಮಗ ಮಿಂದ ।*
*ಕೆಸರಿಲ್ಲದಂಗಳಾಗ ಕೆಸಲ್ಯಾಕನಾಗ್ಯಾವ*
*ಊರಿಗೆ ದೊಡ್ಡವರ ಮಗ ಮಿಂದ ॥*

ಇದೆಲ್ಲ ವರನ ಸಡಗರವಾದ ಬಳಿಕ "ಹಂಚಗಣಿ, ಬೆಂಚಗೂಣಿ ಮುತ್ತಿನ ನಾಗುರಣಿ ಕುಸುಮಲ್ಲಿಯಾದ ಭೂದೇವಿಗೆ, ಮುತ್ತಿನ ಬಟ್ಟಿಟ್ಟ ಮುತ್ತೈದೆಯರೆಲ್ಲ" ಎಣ್ಣೆ ಹಚ್ಚುವದಕ್ಕೆ ಸಜ್ಜಾಗುವರು. ಗಂಜಿಯ ಸೀರೆಯುಟ್ಟ, ಗಂಧದ ಬಟ್ಟಿಟ್ಟ, ಒಲ್ಲೆ ಕಾಲುಂಗರಿಟ್ಟ, ಮುಡಿಸಣ್ಣ ಮುತ್ತಿನ ನಾನಿಟ್ಟ ನಲ್ಲೆಯರೈವರು ಕಂಚಿನ ಬಟ್ಟಲಲ್ಲಿ ಮಿಂಚೆಣ್ಣಿ ತಕ್ಕೊಂಡು, ಬೆಳ್ಳಿಯ ಬಟ್ಟಲಲ್ಲಿ ಎಳ್ಳೆಣ್ಣೆ ತಕ್ಕೊಂಡು,

ಹವಳಸರ, ಬವಳಸರ ಮ್ಯಾಲ ಮುತ್ತಿನಸರ ತಾಯಿತಲ್ಯಾವಳ ತಾಳಿ ಕಟ್ಟಿಕೊಂಡು ವಧುವಿಗೆ ಎಣ್ಣೆ ಅರಿಸಿಣ ಹಚ್ಚುವರು.

**ದೇವಕಾರ್ಯ ವಿಧಾನ**

ಐವರು ಮುತ್ತೈದೆಯರು ಕುಂಬಾರನ ಮನೆಯಿಂದ ಹೊಸ ಕೊಡಗಳನ್ನು ತಂದು ನೀರು ತುಂಬಿಕೊಂಡು ಬರುವರು. ಆ ಕೊಡಗಳು ಎಂಥವು? ಎಡಬಲದಲ್ಲಿ ಕಪ್ಪುರದ ತಿಪ್ಪೆಯುಳ್ಳ ಮನೆಯ ಕುಂಬಾರಣ್ಣನು, ಮೊಸರು ಬೋನವುಂಡು ಕೆಸರು ತುಳಿದು ಸಿದ್ಧ ಮಾಡಿದ ಐರಾಣಿ ಕೊಡಗಳಿಗೆ, ಕಡಗದ ಕೈಯುಳ್ಳ ಕುಂಬಾರವ್ವನು ಬಾಳಿ ಬನದ ಒಂದು ಅರಗಿಳಿಯನ್ನು ಬರೆದಿದ್ದಾಳೆ. ಅಂಥ ಐರಾಣಿ ತಂದಬಳಿಕ ಮುತ್ತೈದೆಯರು ಒಂದು ಮಡಿ ಬಟ್ಟೆಯ ಮೇಲೆ ನಂದಿಯ ಮರ್ತಿಯಿಟ್ಟು, ಕಡಲೆ ಹಿಟ್ಟಿನ ಮುದ್ದೆಯನ್ನು ಕೈಯಲ್ಲಿ ಹಿಡಿದು ದುಂಡಗಿನ ಗುಳಿಗೆಮಾಡಿ ಆ ಮರ್ತಿಯ ಮೇಲೆ ಮಳೆಗರೆದಂತೆ ಎಸೆಯುವರು. ಅದಕ್ಕೆ "ನಂದಮಾಕ" ವಿಧಾನವನ್ನು ವರು.

**ನೂಲು ಸುತ್ತುವದು (ಸುರಿಗೆ ಎರೆಯುವದು)**

ಮದುಮಕ್ಕಳನ್ನು ಸ್ನಾನ ಮಾಡಿಸುವ ಇನ್ನೊಂದು ಪ್ರಸಂಗವು ಅಕ್ಷತೆಯ ಆಗ ನಾಲ್ಕು ಮೂಲೆಗೆ ನಾಲ್ಕು ತಂಬಿಗೆ ಇರಿಸಿ ಅವುಗಳ ಸುತ್ತುಮುತ್ತು ಮೇರೆಯಂತೆ ನೂಲು ಸುತ್ತಿ ನಟ್ಟನಡುವೆ ಮಣಿಯಿಟ್ಟು ಮದು ಮಕ್ಕಳನ್ನು ಎರೆಯುತ್ತಾರೆ. ಅದೇ ಕಾಲಕ್ಕೆ ಮದುವಣಿಗರ ತಾಯಿಯರೂ ಸ್ನಾನಕ್ಕೆ ನಿಲ್ಲುವದುಂಟು. ಅದಾವುದೋ ನಾಡಿನ ಬಡಿಗನು ಮಾಡಿ ಮಾಣಿಕ ಕಾಲಕ್ಕೆ ಬರುವದು.

ಜಡಿಸಿದ ಮಣಿಯಿರಿಸಿ, ಅಲ್ಲೆಂಬ ಪರಿವೆಯಲ್ಲಿ ಗಿಲ್ಲೆಂಬ ಮಗಿ ಹಾಕಿ ನೀರು ಬೆರೆಸಿ, ಜಿಲ್ಲೆಯ ಕಾಲು ಕೆಸರಾಗುವಂತೆ ಮುತ್ತೈದೆಯರು ತಾಯಿ–ಮಕ್ಕಳನ್ನು ಮೀಯಿಸುವರು. ಸಲ್ವರು ವಧು–ವರರಿಗೆ ಅಕ್ಷತೆ ಹಾಕಿದ ಬಳಿಕ ಕೆಲಹೊತ್ತಿನ ಮೇಲೆ ಅವರಿಂದ ನಗೆಯಾಟ ಆಡಿಸುವರು. ಅದೇ ಅಡಿಕೆಯಾಟ. ಆಗ ಹಾಡುವ ಹಾಡಿನಲ್ಲಿ ವಧುವು ವರನ ಪಾದ ತೊಳೆಯುವಳೆಂದೂ, ಆಗ ಪಾದದಲ್ಲಿ ಪದುಮ ಕಾಣುವಳೆಂದೂ ಅದು ಆನೆ ಏರುವಂಥ ಬಲ ಬರುವ ಕುರುಹೆಂದೂ ಭಾವಿಸು ವಳು. ಆದರೆ ವರನು ಕೇಳುವ ಒಂದು ಪ್ರಶ್ನೆಗೆ, ವಧುವಿತ್ತ ಉತ್ತರವೇನಿದೆ ನೋಡಿರಿ,

***"ಆರೂರ ರಾಜ್ಯ ನಿಮ್ಮ ತಮ್ಮ ಆಳಿದರೇನ?***
***ನಗಿ ನಮ್ಮ ಕಾಲ ತೊಳದಲ್ಲ"***
***"ನತ್ತೀಗಿ ನಿಮ್ಮ ಕಾಲ ನಾವ್ಯಾಕ ತೊಳೆಯನು ದೊರೆಯೇ***
***ಮುದಿತನ ಪಡೆದೇವ"***

ಎಂಬರ್ಥದ ಸಂವಾದಗಳೆಷ್ಟೋ ಬರುವವು.

**ಭೂಮದ ಹಾಡು**

ಭೂಮವೆಂದರೆ ಲಗ್ನ ಶಾಂತಿಯ ಮಹಾನೈವೇದ್ಯ, ರ್ವವಿಧದ ಪಕ್ವಾನ್ನ ಗಳನ್ನು ಮದುಮಕ್ಕಳ ಮುಂದೆ, ಹೊಸ ದುರುಡಿಯ ಮುತ್ತೈದೆಯರು, ವಿವಾಹಿತ ಪುರುಷರು ಅದನ್ನು ತೆರೆದು ಉಣ್ಣುವರು. ಸತ್ವ

ವನ್ನೊಳಗೊಂಡದ್ದೇ ಭೂಮ ಭೋಜನದ ವರ್ಪದರ್ಥಗಳ ಸಮಾವೇಶವನ್ನೂ ಅಲ್ಲಿ ಕಾಣಬಹುದು. ಜೀವನದ ವಾರ್ಂಗೀಣ ಸ್ವರೂಪವನ್ನು ಮಹಾ ನೈವೇದ್ಯ ದಂತೆ ಈಶಪ್ರಸಾದವೆಂದು ಸ್ವೀಕರಿಸುವದಕ್ಕೆ ದಂಪತಿಗಳು ದೀಕ್ಷೆ ಹೊಂದುವಂತೆ ತೋರುತ್ತದೆ. ಹಂದರದಲ್ಲಿ ಚಂದದ ಒಲೆ ಹೂಡಿ ಗಂಧದ ಚೆಕ್ಕಿಯಿಂದ ಬೆಂಕಿ ಹೊತ್ತಿಸಿ ಮದುಮಗನ ಅಕ್ಕ ಮಾಡಿದ ಒಂದಡಿಗೆ; ಕಪ್ಪುರದ ಚೆಕ್ಕಿಯಿಂದ ಬೆಂಕಿ ಹೊತ್ತಿಸಿ ಮದುಮಗನ ತಾಯಿ ಮಾಡಿದ ಇನ್ನೊಂದಡಿಗೆ, ಹತ್ತುಮಾನದ ಪರಡಿಯ ಪಾಯಸವನ್ನು ಮುತ್ತಿನ ಕಂಕಣ ತಿರುವುತ್ತ ತಂಗೆವ್ವ ಎಡೆ ಮಾಡಿದರೆ, ಹವಳದ ತಿರುಹುತ್ತ ಇನ್ನೊಬ್ಬ ತಂಗಿ ಎಡೆ ಮಾಡುವಳ ಹಾಳಿನಲ್ಲಿ ಇಂಬಾಗಿ ಬೆಳೆದ ನಿಂಬೆಯ ಹೋಳು; ಮರಡಿಯಲ್ಲಿ ಬೆಳೆದು ತಂದರೆ ಬರುವ ಮೂಕಣಿಯ ಹಪ್ಪಳ; ಎರೆಯಲ್ಲಿ ಬೆಳೆದು ತಂದವರ ಮನೆಗೆ ಬರುವ ಕಡಲೆಯ ಕೆಳಗೆ ಮುಚ್ಚಿಟ್ಟು

ಶಂಡಿಗೆ, ಮೆಂತಿಯಲ್ಲಿ ಕಡ್ಡಿ ಹಾಕಿ ಅತ್ತೆ ಕಾಸಿದರೆ ಇಪ್ಪತ್ತೊಂದು ಓಣಿ ಕಂಪಿಡುವ ತುಪ್ಪ, ಮೇಲಿಟ್ಟ ಕುರುಡೆ, ಮಾವಿನುಪ್ಪಿನಕಾಯಿ– ಇವೆಲ್ಲ ಭೂಮದಲ್ಲಿ ಭೋಜನ ಪದರ್ಥಗಳು, ಭೋಜನಕ್ಕೆ ಅಪ್ಪಗಳಲ್ಲಿ ಅಪ್ಪನಾದ ಹಿರಿಯಪ್ಪ, ಅಣ್ಣಗಳಲ್ಲಿ ಅಣ್ಣನಾದ ಹಿರಿಯಣ್ಣ, ಅವ್ವಗಳಲ್ಲಿ ಅವ್ವನಾದ ಹಿರಿಯವ್ವ ಎಲ್ಲರೂ ಬರಬೇಕು.

**ಬೀಗರ ಅಪಹಾಸ್ಯದ ಹಾಡುಗಳು**

ಮದುವೆಯ ಮುಖ್ಯ ವಿಧಾನಗಳೆಲ್ಲ ಮುಗಿದ ಮೇಲೆ ಮದುಮಕ್ಕಳ ಮೆರವಣಿಗೆ ಹೊರಡುವದು. ಕಾಲಕ್ಕೆ ಬೀದಿಯಲ್ಲಿ ಎರಡೂ ಕಡೆಯ ಬೀಗರ ಪಕ್ಷದಿಂದ ಎರಡು ತಂಡಗಳಾಗಿ ಹೆಣ್ಣು ಮಕ್ಕಳು ಒಬ್ಬರನ್ನೊಬ್ಬರು ಅಪಹಾಸ್ಯ ಮಾಡುವ ಹಾಡು ಹೇಳುತ್ತಾರೆ. ಅದು ಒಮ್ಮೊಮ್ಮೆ ಕದನದ ವರೆಗೂ ಹೋಗು ತದೆ. ಆದರೆ ಭೂಮಾಫಜಕರಾದ ಮೊದಲಿಗರು ಈ ತರದ ನಗೆಚಾಟಿಕೆಗೆ ಬೇಕೆಂತಲೇ ಅವಕಾಶವಿಟ್ಟಂತೆ ತೋರುತ್ತದೆ.

***ಸರಕ್ ಸರಿತಲ್ಲ ಬೀಗರ ಸ್ವರೂಪ ತಿಳಿತಲ್ಲ ॥ ಪ ॥***
***ಆನಿ ಬರತಾವಂತ ಆರು ಬಣವಿ ಕೊಂಡ***
***ಆನೆಲ್ಲಿ ನಿಮ್ಮ ದಳವೆಲ್ಲಿ? । ಬಿಗಾ ।***
***ಬೋಳೋರಿ ಮ್ಯಾಲ ಬರತಾರ ॥ 1 ॥***
***ಬೀಗತೊಳ್ಳೆವಳಂತ ಅಡಗಿ ಮನೆಯ ಕೊಟ್ಟ***
***ಹೋಗಿ ಘಳಿಗೆ ಬಗಲಾಗ । ಅವರಣ್ಣ ।***
***ನೀಡ್ತಿಕ್ಕಿಲ್ಲೆಂದು ಕಸಗೊಂಡ ॥ 2 ॥***
***ಎಲ್ಲಾರು ಕಟ್ಯಾರ ಮಲ್ಲಿಗೂವಿನ ದಂಡಿ***
***ಬೀಗೂತಿ ಕಟ್ಯಾಳ ಹುಲ್ಲೊರಿಯ ॥ ಅವರಣ್ಣ ।***
***ಕುದುರೀಗಿಲ್ಲೆಂದು ಕಸಗೊಂಡ ॥ 3 ॥***

**ಕೂಸು ಒಪ್ಪಿಸುವದು ಕಾರ್ಯಕ್ರಮ**

ಮದುವೆಯ ವಿಧಾನಗಳಲ್ಲಿ ಕೊನೆಯದೇ ಕೂಸು ಒಪ್ಪಿಸುವದು. ವರನ ತಾಯಿ ತಂದೆಗಳಿಗೆ ಸಲ್ವರ ಸಾಕ್ಷಿಯಾಗಿ ವಧುವಿನ ತಾಯ್ತಂದೆಗಳು ಮಗಳನ್ನು ಒಪ್ಪಿಸಿಕೊಡುವರು. ಆಗ ಹೇಳುವ ಹಾಡು ಕೇಳಿ ಕಣ್ಣೀರು ಸುರಿಸದವರು ಯಾರೂ ಇರಲಿಕ್ಕಿಲ್ಲ. ಕೂಸು ಒಪ್ಪಿಸುವ ಈ ವಿಧಾನಕ್ಕೆ 'ನಾಗೋಲಿ ಚೌಗೋಲಿ' ಎಂಬ ಇನ್ನೊಂದು ಹೆಸರೂ ಇದೆ.

***ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರಗೇನ ॥***
***ಹಂಬಲಿಸಿ ನಿನ್ನ ಹಡೆದೇನ ॥***
***ಹಂಬಲಿಸಿ ನಿನ್ನ ಹಡೆದೇನ ಚಿತ್ರದಗೊಂಬಿ***
***ನಿನಗೊಪ್ಪಿಸಿ ಕೊಡಲ್ಲಾಂಗ ॥***
***ತೊಟ್ಟಿಲ ತೂಗಂದ್ರ ಸಿಟ್ಟಲೆ ಕೂಡೋಳ ।***
***ಬಟ್ಟಲ ಬೆಳಗಾಕ ಅರಿಯಳ ॥***
***ಬಟ್ಟಲ ಬೆಳಗಾಕ ಅರಿಯಾದ ಮಗಳನ್ನು***
***ಕೊಟ್ಟೇನು ಮಾವನ ಕೈಯಾಗ ॥***

ಕಪ್ಪುರದ ಗುಡ್ಡಕ್ಕೆ ತಪ್ಪದಲೆ ಬೆಂಕಿ ಕೊಟ್ಟಂತೆ, ಅವರಪ್ಪನ ಹೊಟ್ಟಿ ತಳಮಳಿಸುತ್ತದೆ. ಸುಡುವ ಬೆಂಕಿಗೆ ಎಣ್ಣಿ ಕೊಡ ಸುರವಿದಂತೆ ಹಡೆದವ್ವನ ಹೊಟ್ಟಿ ಸಣ್ಣತಮ್ಮಾಗಿದ್ದರೆ, ಮಾನ್ಯದ ಹೊಲದಲ್ಲಿ ಸರಿಪಾಲು ತಕ್ಕೊಂಡು ಚಿನ್ನಾ, ನನ್ನ ಹತ್ತಿರ ತಣ್ಣಗಿರುತ್ತಿದ್ದಿಯೆಂದು ಅಣ್ಣನ ಕಳವಳ, ಹಿರಿಯಣ್ಣನಾಗಿದ್ದರೆ ಎರೆಯ ಹೊಲದಲ್ಲಿ ಸರಿಪಾಲು ತಕ್ಕೊಂಡು ದೊರಿಯೆ ನನ್ನ ಹತ್ತಿರ ಇರುತ್ತಿದ್ದಿಯೆಂದು ತಮ್ಮನ ಕಸಿವಿಸಿ, ಕೊನೆಗೆ– "ನಮ್ಮ ಮಗಳಲ್ಲವ್ವ, ನಿಮ್ಮ ಮಗಳೇಕೆಂದು, ಛಂದಾಗಿ ಮಗಳನ್ನು ಸಲಕ್ವ । ಛಂದಾಗಿ ಮಗಳನ್ನ ಸಲಹವ್ವ ಅನ್ನುತ್ತ ಅವ್ವನ ಕೈಯಾಗ ಕೊಡಿರೆವ್ವ" ಎಂದು ಕೂಸು ಒಪ್ಪಿಸಿ ಕೊಡುವರು.ಇದಾದ ಮೇಲೆ ಬೀಗರು ತಮೂರ ಹಾದಿ ಹಿಡಿಯುತ್ತಾರೆ. ಅಲ್ಲಿ ನಿಂತು ನೀರು ಕುಡಿಯುವದಿಲ್ಲ. ನಾಗಾಲೋಟವೇ "ನಾಗೋಲಿ ಚೌಗೋಲಿ ಆದ ಬಳಿಕ ನಾಯಿ ಸಹ ನೀರು ಕುಡಿಯುವದಿಲ್ಲ" ಎಂಬ ಗಾದೆಯಿದೆ.

**ಉಪಸಂಹಾರ**

ಹೀಗೆ ಮದುವೆಯ ಹಾಡುಗಳು ನಮ್ಮ ದಾಂಪತ್ಯ ಜೀವನದ ವಿಧಾನವನ್ನು , ವಿವಿಧ ಛಂದಸ್ಸುಗಳಲ್ಲಿ ಮನೋಜ್ಞವಾಗಿ ರಸ ಸೂಸುತ್ತ ಬತ್ತದ ಸೆಲೆಗಳಾಗಿ ನಿಂತು ಅಜರಾಮವಾಗಿ ಉಳಿದು ಬಂದಿವೆ. ಇಂದಿನ ಓಟದ ಜೀವನದಲ್ಲಿ ಸಂಪ್ರದಾಯಗಳು ಹೇಳಕೇಳದೆ ಹೋರಟ ನಿಂತ್ತಿವೆ. ಹಿಂದಿನ ಕಾಲದಲ್ಲಿ ಮದುವೆ ಮನೆ ಅಂದರೆ ಮೂರಮೂರು ತಿಂಗಳ ಮಂಚೇನೆ ಮಧುವಣಗಿತ್ತಿಯಂತೆ ಶೃಂಗಾರಗೊಂಡು ಭವ್ಯ ಅರಮನೆಯಂತೆ ಕಾಣತ್ತಿತ್ತು. ಬೀಗರು. ಅಣ್ಣತಮ್ಮಂದಿರು, ಅಕ್ಕತಂಗಿಯರು, ಮಾವಂದಿರು, ಅತ್ತಿಗೆ–ನಾದಿನಿಯರು ಮುತಾಂದವರು ಮನೆ ತುಂಬಿ ತುಳುಕವಂತೆ ಆ ಕಡೆಯಿಂದ ಈ ಕಡೆ, ಈ ಕಡೆಯಿಂದ, ಆ ಕಡೆ ಓಡಾಡುವ ಕಲರವ, ಚಿಣ್ಣನರ ಕಿರಿಚಾಟ, ಕೂಗಾಟ, ಮನಸ್ಸಿಗೆ ಮುದನೀಡುವಂತೆ ಅನಿಸುತ್ತಿತ್ತು.

**ಆಧಾರ ಗ್ರಂಥಗಳು**


- ರಾಜಪ್ಪ ದಳವಾಯಿ. (ಸಂ.) (2008). ಕನ್ನಡ ಸಾಹಿತ್ಯ ಕೋಶ. ದಳವಾಯಿ ಪ್ರಕಾಶನ.
- ಸಿಂಪಿ ಲಿಂಗಣ್ಣ. (2016). *ಜನಾಂಗದ ಜೀವಾಳ.* ಹಲಸಂಗಿ ಗೆಳೆಯರ ಪ್ರತಿಷ್ಠಾನ.
- ಸಿಂಪಿ ಲಿಂಗಣ್ಣ. (2016). ಸ್ವರ್ಗದೋಲೆಗಳು. ಹಲಸಂಗಿ ಗೆಳೆಯರ ಪ್ರತಿಷ್ಠಾನ.
- ಬಿರಾದಾರ, ಎಂ. ಜಿ. (1990). ಸಾಗರ ಸಿಂಪ. ಕನ್ನಡ ಸಾಹಿತ್ಯ ಪರಿಷತ್ತು.
- ಮುಳಗುಂದ., ಚೆ. ವಿ. (1993). ಸಿಂಪಿಯ ಮುತ್ತು. ಮಾತೋಶ್ರೀ ಪ್ರಕಾಶನ.